## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 23-09-2022

### ಗಾಂಧಿಗಂಜ ಪೊಲೀಸ ಠಾಣೆ:ಪ್ರಕರಣ ಸಂಖ್ಯೆ: 141/2022: 379 ಐಪಿಸಿ:

ದಿನಾಂಕ : 22-09-2022 1800 ಗಂಟೆಗೆ ಫಿರ್ಯಾದಿ ವಿನಯಕುಮಾರ ತಂದೆ ಅಮೃತರಾವ ಭಾವಿಕಟ್ಟಿ ವಯ: 37 ವರ್ಷ ಸಾ: ಬಕಚೌಡಿ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆಂದರೆ ಇವರ ಹತ್ತಿರ ಒಂದು ಹಿರೊ ಹೊಂಡಾ ಸ್ಪೆಲೆಂಡರ ಬೈಕ್ ನಂ ಕೆಎ-38-ಎಲ್-824 ಇಂಜಿನ್,ನಂ ,ಹೆಚ್ಎ10ಇಜೆಸಿಹೆಚ್ಎಫ್13572,ಸಿಹೆಚ್ ಇಎಸ್ಎಸ್ಐ,ನಂ ಎಮ್ ಬಿಎಲ್ ಹೆಚ್ಎ10ಎಮ್ ಸಿಹೆಚ್ಎಫ್25620 ಇದ್ದು ಅದರ ಅಂದಾಜು ಕಿಮ್ಮತ್ತು 35000 ರೂ. ಇರುತ್ತದೆ. ಹಿಗಿರುವಾಗ ದಿನಾಂಕ 14-09-2022 ರಮದು ಸಾಯಂಕಾಲ 1800 ಗಂಟೆಯಿಂದ ರಾತ್ರಿ 2200 ಗಂಟೆಯ ಮಧ್ಯದ ಅವಧಿಯಲ್ಲಿ ಮನೆಯ ಮುಂದೆ ನಿಲ್ಲಿಸಿರುವ ಬೈಕನ್ನು ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೊಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಧನ್ನೂರಾ ಪೊಲೀಸ ಠಾಣೆ: ಪ್ರಕರಣ ಸಂಖ್ಯೆ: 134/2022: 457,380 ಐಪಿಸಿ:

ದಿನಾಂಕ: 22/09/2022 ರಂದು 1600 ಗಂಟೆಗೆ ಫಿರ್ಯಾದಿ ಶ್ರೀಮತಿ ಚಿತ್ರಕಲಾ ಗಂಡ ವಿಠ್ಠಲರಾವ ಮುಖ್ಯಗುರುಗಳು ಸರ್ಕಾರಿ ಪ್ರೌಢ ಶಾಲೆ ಮಳಚಾಪೂರ ಸಾ: ರಾಮಚಂದ್ರ ನಗರ ಬೀದರ ಇವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆಂದರೆ ದಿನಾಂಕ: 21/09/2022 ರಂದು ಶಾಲೆಯ ಅವಧಿ ಮುಗಿದ ನಂತರ ಎಲ್ಲಾ ಕೊಣೆಗಳು ಬೀಗ ಹಾಕಿ ಹೊಗಿದ್ದು ಹಾಗು ಅಡುಗೆ ಕೊಣೆಯಲ್ಲಿ ಬಿಸಿ ಊಟದ ಆಹಾರ ಧಾನ್ಯಗಳು ದಿನಾಂಕ: 21/09/2022 ರಂದು ಸ್ಟಾಕ ರೀಜಿಸ್ಟರನಲ್ಲಿ ಅಕ್ಕಿ 1884.4 ಕೆಜಿ, ತೊಗರಿ ಬೇಳೆ 383.54 ಕೆಜಿ, ಗೊಧಿ 144 ಕೆಜಿ, ಎಣ್ಣೆ 137.643 ಲೀಟರ ಹಾಗು ಹಾಲಿನ ಪುಡಿ 75.162 ಕೆಜಿ ಇದಿದ್ದು ಮನಗಂಡು ದಿನಾಂಕ 22/09/2022 ರಂದು ಎಂದಿನಂತೆ ಶಾಲೆ ಪ್ರರಂಭದ ಸಮಯದ ಮುಂಚೆ ಶಾಲೆಯ ವರ್ಗಕೊಣೆಗಳು ಸಿಬ್ಬಂದಿಯವರು ಕೊಣೆಗಳ ಬೀಗ ತೆಗೆಯುವುದರ ಜೊತೆಗೆ ಅಡುಗೆ ಕೊಣೆ ಬೀಗ ತೆಗೆಯಲ್ಲಿ ಅಡುಗೆ ಕೊಣೆಯ ಕೀಲಿ ಮುರಿದಿದ್ದು ಕಂಡು ಬಂತು. ತದನಂತರ ಅಡುಗೆ ಕೊಣೆ ಒಳಗೆ ಹೊದಾಗ ಸರ್ಕಾರದಿಂದ ಒದಗಿಸಲಾಗಿದೆ ಮದ್ಯಾಹ್ನ ಬಿಸಿ ಊಟದ ಆಹಾರ ಧಾನ್ಯಗಳಾದ ತೊಗರಿ ಬೇಲೆ 243.54 ಕೆಜಿ, ಅ.ಕಿ. 22405.68 ರೂಪಾಯಿ, ಎಣ್ಣೆ 102.643 ಲೀಟರ ಅ.ಕಿ. 17859.882 ರೂಪಾಯಿ ಹಾಗು ಹಾಲಿನ ಪುಡಿ 3 ಕೆಜಿ ಅ.ಕಿ. 825.00 ರೂಪಾಯಿ ಕಳ್ಳವು ಆಗಿರುತ್ತದೆ. ಹೀಗೆ ಒಟ್ಟು 41,089/-ರೂಪಾಯಿ ಬೆಲೆಯ ಸಾಮಾನುಗಳನ್ನು ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಹೊಕ್ರಾಣ ಪೊಲೀಸ ಠಾಣೆ: ಪ್ರಕರಣ ಸಂಖ್ಯೆ: 67/2022: 32,34 ಕೆ ಇ ಕಾಯ್ದೆ:

ದಿನಾಂಕ: 22/09/2022 ರಂದು ಧೊಪರವಾಡಿ ತಾಂಡಾದ ಹತ್ತಿರ ತಗಡದ ಶೆಡ್ಡಿನ ಬಳಿಗೆ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ಐದು ಲೀಟರಿನ ಪ್ಲಾಸ್ಟಿಕ ಕ್ಯಾನಿನಲ್ಲಿ ಕಳ್ಳ ಭಟ್ಟಿ ಸರಾಯಿ ಇಟ್ಟುಕೊಂಡು ಜನರಿಗೆ ಮಾರಾಟ ಮಾಡುತ್ತಿದ್ದಾನೆಂದು 1400 ಗಂಟೆಗೆ ಖಚಿತ ಮಾಹಿತಿ ಬಂದಿದ ಮೇರೆಗೆ ಪಿಎಸ್ಐ ರವರು ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ದಾಳಿ ಮಾಡಿ ಅವನನ್ನು ಹಿಡಿದುಕೊಂಡಿದ್ದು,. ಸದರಿ ವ್ಯಕ್ತಿಯ ವಶದಲ್ಲಿದ್ದ ಐದು ಲೀಟರಿನ ಕ್ಯಾನನ್ನು ಪರಿಶೀಲಿಸಿ ನೊಡಲು ಕಳ್ಳ ಭಟ್ಟಿ ಸರಾಯಿ ಇದ್ದು ಲೀಟರಗೆ 200/-ರೂಪಾಯಿಯಂತೆ ಮಾರಾಟ ಮಾಡುತ್ತೇನೆ ಅಂತ ಹೇಳಿದನು..ಸದರಿ ವ್ಯಕ್ತಿ ಈ ಕ್ಯಾನಿನಲ್ಲಿ ಇರುವ ಕಳ್ಳಭಟ್ಟಿ ಸರಾಯಿ ಮಾನವರು ಸೇವಿಸಿದರೆ ಮಾನವ ಜೀವಕ್ಕೆ ಮತ್ತು ಆರೋಗ್ಯಕ್ಕೆ ಹಾನಿಕರ ಅಂತ ಗೊತ್ತಿದ್ದರೂ ಸಹ ಜನರಿಗೆ ಮಾರಾಟ ಮಾಡುತ್ತಿದ್ದು, ಸದರಿ ಕ್ಯಾನ್ ಮತ್ತು ಕ್ಯಾನಿನಲ್ಲಿದ್ದ ಐದು ಲೀಟರದಷ್ಟು ಸರಾಯಿ (ಕಳ್ಳ ಭಟ್ಟಿ) ಜಪ್ತಿ ಮಾಡಿಕೊಂಡಿದ್ದು, ಅರೋಪಿತನ ವಿರುಧ್ದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.